Sri S. S. SHETTAR.—I raise a point of order. I have put a question. It is the responsibility of the Government to reply it. I am not bothered which particular Minister answers it. If it is not replied my rights are affected.

Mr. SPEAKER.—I shall consider the Point of order along with the other Point of Order.

Next Question by hon'ble Member Sri Gureddi.

Koyna Dam

51. Sri S. M. GUREDDI (Muddebihal):—

Will the Minister for Public Work be pleased to state :—

whether the State Government expect the opinion of the Engineers of the Central Government about the suspected breach of Koyna Dam in Maharashtra ?

A.—Sri VEERENDRA PATIL (Chief Minister).—

Yes.

ಶ್ರೀ ಎಸ್. ಎಂ. ಗುರೆಡ್ಡಿ.—ಕೊಯಿನಾ ಅಣೆಕಟ್ಟು ಒಡೆಯುತ್ತದೆಂಬ ಭೀತಿ ಇರುವುದರಿಂದ ರಾಜ್ಯ ಸರ್ಕಾರದ ಇಂಜನಿಯರುಗಳಿಂದೇನಾದರೂ ಅಣೆಕಟ್ಟಿನ ಅಂದಾಜಿನ ಬಗ್ಗೆ ವರದಿಯನ್ನು ಪಡೆಸಿಕೊಂಡಿದ್ದೀರಾ ?

† ಶ್ರೀ ವೀರೇಂದ್ರ ಪಾಟೀಲ್.—ಪಡೆಸಿಕೊಂಡಿದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಆ ರೀತಿಯಾಗಿ ವರದಿ ಬಂದಮೇಲೆ ಕೊಯಿನಾ ಅಣೆಕಟ್ಟು ಒಡೆಯುತ್ತದೆಯೆನ್ನುವುದನ್ನು ಈಗಾಗಲೇ ಕೃಷ್ಣಾ ದಂಡೆ ಮೇಲೆ ಇರತಕ್ಕ ಗ್ರಾಮಗಳಿಗೆ ಆದೇಶವಾಗಿ ನೀಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲ. ಹೋದಸಲ ಇಲ್ಲಿ ಭೂಕಂಪವಾದ ಮೇಲೆ ಪುನಃ ಹೈ ಇಂಟೆನ್ಸಿವ್ ಭೂಕಂಪವಾಯಿತು. ಅದರಿಂದ ಆ ಡ್ಯಾಂನಲ್ಲಿ ಕೆಲವು ಕ್ರಾಕ್ಸ್ ಡೆವಲಪ್ ಆಗಿವೆ ಯೆಂದು ವರ್ತಮಾನ ಬಂತು. ಆಗ ಕೇಂದ್ರ ಸರ್ಕಾರದವರು ಒಂದು ಎಕ್ಸ್‌ಪರ್ಟ್ ಬಾಡಿಯನ್ನು ರಚನೆಮಾಡಿದರು. ಅವರು ಆ ಡ್ಯಾಮನ್ನು ಪ್ರತ್ಯಕ್ಷವಾಗಿ ನೋಡಿಕೊಂಡು ಒಂದು ಒಂದು ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಾರೆ. ಆ ಒಂದು ವರದಿಯನ್ನು ನಾವು ಸಹಾ ತರಿಸಿಕೊಂಡಿದ್ದೇವೆ. ಕ್ರ್ಯಾಕ್ ಬಂದಾಗ್ಗೆ ಎಕ್ಸ್‌ಪರ್ಟ್ ಯಾಫ ರೀತಿಯಲ್ಲ ನಲಹೆಮಾಡಿದ್ದಾರೆಂದರೆ ಆ ಡ್ಯಾಮನ್ನು ಸ್ಟೆಗ್‌ನ್ ಮಾಡುವುದಕ್ಕೆ ಮತ್ತು ಕಾಂಕ್ರೀಟನ್ನು ರೀ ಇನ್‌ಫೋರ್ಸ್ ಮಾಡುವುದಕ್ಕೆ ಏನೇನು ಕ್ರಮಗಳನ್ನು ಇಂಜೆರಿಂ ಮತ್ತು ರಾಂಗ್ ರೇಂಜ್‌ನಲ್ಲಿ ಹಾಕಿಕೊಂಡಿದ್ದಾರೋ ಅದೆಲ್ಲವನ್ನು ಎರಡು ವರ್ಷಗಳೊಳಗೆ ಮಾಡುವ ಪ್ರಕಾರ ಮಹಾರಾಷ್ಟ್ರ ಸರ್ಕಾರದವರು ಈಗಾಗಲೇ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಎಕ್ಸ್‌ಪರ್ಟ್ ಬಾಡಿ ಕೊಟ್ಟ ನಲಹೆ ಪ್ರಕಾರ ಅವರು ಮಾಡುತ್ತಿದ್ದಾರೆ. ನಾವು ಈ ಮಧ್ಯದಲ್ಲಿ ಚೀಫ್ ಇಂಜನಿಯರುಗಳಿಗೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಪ್ರತ್ಯಕ್ಷವಾಗಿ ಅಲ್ಲಿಗೆ ಹೋಗಿ ಆ ಡ್ಯಾಮನ್ನು ನೋಡಿಕೊಂಡು ಬನ್ನಿ, ಏಕೆಂದರೆ ಬಹಳ ಜನರು ಅದರಿಂದ ಭಯ ಭೀತರಾಗಿದ್ದಾರೆ, ಮತ್ತೆ ಎಲ್ಲಿ ಆ ಡ್ಯಾಂ ಒಡೆದುಹೋಗುತ್ತದೋ ಎಂಬುದಾಗಿ ಕಳವಳಪಟ್ಟಿದ್ದಾರೆಂದು ಅವರಿಗೆ ಸೂಚನೆ ಕೊಟ್ಟಿದ್ದೇವೆ. ಹಳ್ಳಿಗಳು ಎಲ್ಲ ಮುಳುಗಿಹೋಗುತ್ತವೋ ಎನ್ನುವ ಭಯವೂ ಇತ್ತು. ಅವರೆಲ್ಲರೂ

†Indicates that remarks or speeches have not been revised by the member concerned

ಹೋಗಿ ನೋಡಿಕೊಂಡು ಬಂದಿದ್ದಾರೆ. ಕೇನಲ್ ಆ್ಯಮಿನ ವಿಚಾರ ಅಷ್ಟೇ ಅಲ್ಲ. ಆ ಡ್ಯಾಮ್ ಬ್ರೇಕ್ ಆದರೆ ಏನು ಅನಾಹುತವಾಗುತ್ತದೆಯೋ ಎಂದು ಆ ಪ್ರದೇಶದಲ್ಲಿ ಇರತಕ್ಕ ಜನಗಳನ್ನು ಉಳಿಸುವ ಸಲುವಾಗಿ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ಮಹಾರಾಷ್ಟ್ರ ಪ್ರದೇಶದಲ್ಲಿ ಆ ಸರ್ಕಾರದವರು ತೆಗೆದುಕೊಂಡಿದ್ದಾರೆ. ನಮ್ಮ ಅಧಿಕಾರಿಗಳೂ ಸಹ ಅಲ್ಲಿ ದೀಕ್ಷೆಯರಾಗಿ ಸ್ಟಡಿಮಾಡಿಕೊಂಡು ಬಂದಿದ್ದಾರೆ. ಅಂಥಾ ಪರಿಸ್ಥಿತಿ ಏನಾದರೂ ಬಂದರೆ ನಮ್ಮ ಅನೇಕ ಹಳ್ಳಿಗಳಿಗೆ ಕಷ್ಟವಾಗುತ್ತದೆ ಎಂದು ನಮ್ಮಲ್ಲಿರತಕ್ಕ ಪ್ರದೇಶಗಳಲ್ಲಿ ವಾಸ ಮಾಡತಕ್ಕ ಜನಗಳನ್ನು ಉಳಿಸುವ ಸಲುವಾಗಿ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಒಂದು ಹೈಪವರ್ ಕಮಿಟಿಯನ್ನು ಮಾಡಿದ್ದೇವೆ. ಆ ಕಮಿಟಿಯಲ್ಲಿ ಡಿವಿಜನರ್ ಕಮೀಷನರು, ಚೀಫ್ ಇಂಜಿನಿಯರು, ಡಿ. ಡಿ. ಜಿ. ಅವರುಗಳು ಇದ್ದಾರೆ. ಈ ರೀತಿ ಕಾರ್ಯಕ್ರಮವನ್ನು ಹಾಕಿಕೊಂಡು ಫ್ಲಡ್ ಎಷ್ಟು ಬಂದರೂ ನೀರು ಬರುತ್ತದೆ ಜನಗಳಿಗೆ ತೊಂದರೆಯಾಗುತ್ತದೆ ಎಂದು ಎರಡು ಸರ್ಕಾರದ ಕಡೆಯವರೂ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಏನು ಪ್ರಿಕಾಷನರಿ ಮೆಜರ್ಸ್ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದಾರೆ.

Sri RAJA PID NAIK.—Sir, are any orders issued by the State Government to vacate the villages along the River side of Krishna?

Sri VEERENDRA PATIL.—No such order has been issued to vacate the villages. We have asked our Deputy Commissioner to take all the precautionary measures whenever such things happen. So, they have taken all the precautions as taken by the Maharashtra Government; our officers are also taking such precautions.

ಶ್ರೀ ಎಸ್. ಶಿವಪ್ಪ.—ಆ ಅಣೆಕಟ್ಟು ಬಿರುಕು ಬಿಡತಕ್ಕ ಶಂಕೆ ಇರುವಾಗ, ಅದು ಭಪ್ಪವಾಗಿದೆ ಎನ್ನುವ ನಾಬಿಕೆ ಬರುವವರೆಗೂ ಆ ಅಣೆಕಟ್ಟಿನಲ್ಲಿ ನೀರು ಶೇಖರಣೆ ಮಾಡುವುದನ್ನು ನಿಲ್ಲಿಸುವುದಕ್ಕೆ ಏನಾದರೂ ಪ್ರಯತ್ನ ಮಾಡಿದ್ದೀರಾ?

ಶ್ರೀ ವೀರೇಂದ್ರ ಪಾಟೀಲ್.—ಆ ಅಣೆಕಟ್ಟು ಬರ್ಸ್ಟ್ ಆದರೆ ನಮಗಿಂತ ಹೆಚ್ಚಿನ ಮಟ್ಟದಲ್ಲಿ ಮಹಾರಾಷ್ಟ್ರ ಪ್ರದೇಶದಲ್ಲಿ ಅನಾಹುತವಾಗುತ್ತದೆ. ಅದಕ್ಕಾಗಿ ಎಕ್ಸ್‌ಪರ್ಟ್ ಕಮಿಟಿಯವರು ಆ ಅಣೆಕಟ್ಟಿನಲ್ಲಿ ರಿಜರ್ವಾಯರ್ ಪೂರ್ತಿ ಸೆಟ್ಲರ್ ಮಾಡದೇ ಕೆಸ್ಟ್ ಮಟ್ಟದವರೆಗೆ ಮಾತ್ರ ನೀರನ್ನು ಸ್ಟೋರ್ ಮಾಡಿ ಎಂದು ಶಿಫಾರಸು ಮಾಡಿದ್ದಾರೆ.

ಶ್ರೀ ಸಿದ್ದಯ್ಯ ಕಾಶೀಮಠ.—ಇದರ ಬಗ್ಗೆ ಒಂದು ಹೈಪವರ್ ಕಮಿಷನ್ ನೇಮಕ ಮಾಡಿದ್ದೇವೆ ಎಂದು ಹೇಳಿದಿರಿ, ಹಾಗಾದರೆ ಆ ಕಮಿಟಿಯವರು ಆ ಅಣೆಕಟ್ಟನ್ನು ವಿಜಿಟ್ ಮಾಡಿ ಅದರ ಬಗ್ಗೆ ತಮ್ಮ ಖಚಿತವಾದ ನಿರ್ಣಯವನ್ನು ತಿಳಿಸಿದ್ದಾರೆಯೇ?

ಶ್ರೀ ವೀರೇಂದ್ರ ಪಾಟೀರ್.—ಹೈಪವರ್ ಕಮಿಟಿಯವರು, ಚೀಫ್ ಇಂಜಿನಿಯರು ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದಾರೆ. ನಮ್ಮ ಪ್ರದೇಶದಲ್ಲಿ ಏನು ಪ್ರಿಕಾಷನರಿ ಮೆಜರ್ಸ್ ತೆಗೆದುಕೊಳ್ಳಬೇಕೋ ಅದನ್ನು ನಾವು ತೆಗೆದುಕೊಳ್ಳುತ್ತೇವೆ. ಮುಖ್ಯವಾಗಿ ಅಲ್ಲಿ ಏನಾಗಿದೆ ಎಂದರೆ ಮಹಾರಾಷ್ಟ್ರ ಸರ್ಕಾರದವರು, ಮತ್ತು ನಮ್ಮ ಸರ್ಕಾರದವರೂ ಪ್ರಿಕಾಷನರಿ ಮೆಜರ್ಸ್ ತೆಗೆದುಕೊಂಡು ಎಲ್ಲೆಲ್ಲಿ ಎಷ್ಟು ಪ್ರಮಾಣದಲ್ಲಿ ನೀರು ಬರುತ್ತದೆ, ಯಾವ ರೀತಿ ಆ ಪ್ರದೇಶವನ್ನು ಸಂರಕ್ಷಣೆ ಮಾಡಬೇಕು ಎಂದು ಎರಡೂ ಕಡೆಯ ಸರ್ಕಾರದವರು ಆ ಪ್ರದೇಶದಲ್ಲಿ ಸರ್ವೆ ಮಾಡುತ್ತಾ ಇರುವುದರಿಂದ ಎಷ್ಟು ನೀರು ಬರುತ್ತದೋ ಎಂದು ಜನಗಳಿಗೆ ಸ್ವಲ್ಪ ಭಯ ಬಂದಿದೆ. ಎಂದು ಆ ಅಣೆಕಟ್ಟು ಒಡೆದು ಹೋಗುತ್ತದೆಯೋ, ಇಲ್ಲದೆ ಇದ್ದರೆ ಸರ್ಕಾರದವರು ಏತಕ್ಕೆ ಈ ಕೆಲಸ ಮಾಡುತ್ತಾರೆ, ಅಲ್ಲಿ ಅನಾಹುತ ಇದೆ ಎಂದು ಸರ್ಕಾರವು ಸರ್ವೆ ಸಿದ್ಧತೆ ಮಾಡುತ್ತಿದ್ದಾರೆ ಎಂದು ಅಲ್ಲಿನ ಜನಗಳು ಭಯ ಭೀತರಾಗಿದ್ದಾರೆ. ಅವರು ಆ ರೀತಿ ಭಯ ಭೀತರಾಗಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಎಂ. ನಾಗಪ್ಪ.—ಕೇಂದ್ರ ಸರ್ಕಾರದ ಕೆಲವು ಇಂಜಿನಿಯರುಗಳು ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದಾರೆ ಎಂದು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಮೊದಲು ಹೋದವರು ಒಂದು ಅಭಿಪ್ರಾಯ ಕೊಟ್ಟಿದ್ದಾರೆ. ಎರಡನೇ ಸಾರಿ ಹೋದವರು ಎರಡನೆಯ ಅಭಿಪ್ರಾಯ ಕೊಟ್ಟಿದ್ದಾರೆ. ಈ ಎರಡು ಅಭಿಪ್ರಾಯಗಳಲ್ಲಿ ಯಾವುದು ಸರಿ ಎಂಬುದನ್ನು ತಿಳಿದುಕೊಳ್ಳಲು ತಮ್ಮ ಇಂಜಿನಿಯರನ್ನು ಆ ಸ್ಥಳಕ್ಕೆ ಕಳುಹಿಸಿಕೊಟ್ಟು ಪರೀಕ್ಷೆ ಮಾಡಿಸಿ ಅದನ್ನು ಖಚಿತ ಮಾಡಿಕೊಂಡಿದ್ದೀರಾ?

ಶ್ರೀ ವೀರೇಂದ್ರ ಪಾಟೀಲ್.—ಇಂಡಿಯಾ ಸರ್ಕಾರದವರು ಅಲ್ಲಿಗೆ ಎಕ್ಸ್‌ಪರ್ಟ್ ಕಮಿಟಿ ಯವರನ್ನು ಕಳುಹಿಸಿದ್ದರು. ಆ ಕಮಿಟಿಯಲ್ಲಿ ತಾಂತ್ರಿಕ ತಜ್ಞರೂ ಇದ್ದರು. ಅವರೆಲ್ಲರೂ ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದಾರೆ. ಅವರು ವರದಿ ಮಾಡಿರತಕ್ಕದ್ದು ನಮ್ಮ ಹತ್ತಿರ ಇದೆ. ಈಗಾಗಲೇ ಮಹಾರಾಷ್ಟ್ರ ಸರ್ಕಾರದವರು ಆ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ. ನಾವು ನಮ್ಮ ಪ್ರದೇಶದಲ್ಲಿ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ವಿಚಾರ ಮಾಡಿದ್ದೇವೆ.

Sri H. SIDDAVEERAPPA.—Recently after the earthquake in Iran, it was reported that there was a second tremor in Koyna. Will you examine and ask for further information from the Central Government's Expert Committee?

Sri VEERENDRA PATIL.—Last year's tremor was of high intensity. According to the Experts Committee report and also according to the report that we have received from our engineers, there is no danger to the safety of the dam. Unless another tremor of the same high intensity were to come, nobody is sure as to what is going to happen. That is why we took extra precaution and got report from the Expert Committee. In the light of that report we are taking whatever precautions are necessary.

Sri S. R. KANTHI.—May I know whether the Government will be willing to place the report of the Expert Committee on the Table of the House?

Sri VEERENDRA PATIL.—Is it the suggestion of the hon'ble Member that the report of the Expert Committee should be placed on the Table? It is only for the information of the State Government and they have not circulated these reports for the information of the public so far.

ಶ್ರೀ ಎನ್. ಶರಣಗೌಡ ಇಟಾಂದಾರ್.—ಸೆಂಟ್ರಲ್ ಗವರ್ನಮೆಂಟಿನವರ ವರದಿ ಪ್ರಕಾರ ನಮ್ಮ ಭಾಗದಲ್ಲಿ ಕೃಷ್ಣಾ ನದಿಯ ದಂಡೆಯ ಬಳಿ ಇರುವ ಹಳ್ಳಿಗಳಿಗೆ ಇದರಿಂದ ಎಷ್ಟರಮಟ್ಟಿಗೆ ಅಫೆಕ್ಟ್ ಆಗುತ್ತದೆ ಎನ್ನುವ ವಿವರಗಳು ತಮ್ಮ ಉತ್ತರದಿಂದ ಗೊತ್ತಾಗಲಿಲ್ಲ. ಅಲ್ಲವೆ ತಾವು ಒಂದು ಹೈಪವರು ಕಮಿಟಿ ಮಾಡಿದ್ದೀರಿ ಎಂದು ಹೇಳಿದಿರಿ. ಇದರಂತೆ ಎಷ್ಟು ಹಳ್ಳಿಗಳಿಗೆ ಇದರ ಪರಿಣಾಮ ಉಂಟಾಗುತ್ತದೆ ಎನ್ನುವುದೂ ಗೊತ್ತಾಗಲಿಲ್ಲ. ಮತ್ತು ಇಲ್ಲಿ ತೊಂದರೆಗೆ ಸಿಗುವ ಹಳ್ಳಿಗಳಿಗೆ ಅನುಕೂಲ ಮಾಡಿಕೊಡಲು ಯಾವ ಯಾವ ಯೋಜನೆಗಳನ್ನು ತೆಗೆದುಕೊಳ್ಳಬೇಕು ಎಂದು ಅವರು ಹೇಳಿದ್ದಾರೆ ಮತ್ತು ಇದರ ಬಗ್ಗೆ ಸರಕಾರದವರು ಯಾವ ರೀತಿ ವಿಚಾರ ಮಾಡುತ್ತಿದ್ದಾರೆ ಇದರ ಪರಿಣಾಮ ಏನಾಗುತ್ತದೆ ಎನ್ನುವುದಕ್ಕೆ ಸರಕಾರದವರು ವಿವರಗಳನ್ನು ತಿಳಿಸುವುದಕ್ಕೆ ಆಗುತ್ತದೆಯೆ?

ಶ್ರೀ ವೀರೇಂದ್ರ ಪಾಟೀಲ್.—ಇದರ ತಪಸೀಲುಗಳು ಈಗ ನನ್ನ ಮುಂದಿಲ್ಲ.

Mr. SPEAKER.—There are five to six more questions.

Sri K. H. PATIL.—I have a point of order. I wish to raise it after Question Hour.

Sri B. B. SAYANAK.—May I know whether recently the hon'ble Minister Sri V. L. Patil visited the Koyna Dam and gave a statement to the Press that the dam is in danger?

Sri VEERENDRA PATIL.—I am not aware of any Press-statement by the hon'ble colleague of mine. Whatever I have been telling or informing the House, is based on the report received. It is based on the Expert Committee report from the Government of India.

ಶ್ರೀ ನದಾಫಿಪಪ್ಪ ಪಾಟೀಲ್.—ನಾನು ರಾಜ್ಯ ಸರ್ಕಾರಕ್ಕೆ ನಮ್ಮ ದೇವದುರ್ಗ ತಾಲ್ಲೂಕಿನಲ್ಲಿ ಎರಡು ನೋಟೀಸುಗಳು ಬಂದಿದರ ಬಗ್ಗೆ ಪತ್ರ ಬರೆದಿದ್ದೆ, ಮತ್ತು ಅದರಲ್ಲಿ ಇಂತಹ ನೋಟೀಸನ್ನು ಕೊಡಬೇಕೆಂತಲೂ ತಿಳಿಸಿದ್ದೆ. ಇದರ ಬಗ್ಗೆ ತಾವು ಏನಾದರೂ ಆರ್ಡರು ಮಾಡಿದ್ದೀರೋ, ಇಲ್ಲವೋ ಇದು ಸಾಧ್ಯವಾಗುತ್ತದೋ ಇಲ್ಲವೊ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಸಾಮಾನ್ಯವಾಗಿ ಯಾವ ಸದಸ್ಯರು ನನಗೆ ಪತ್ರ ಬರೆದರೂ ಅವಕ್ಕೆ ಉತ್ತರವನ್ನು ಎಂದಿಗೂ ಕೊಡದೆ ಇರುವುದಿಲ್ಲ. ಬಹುಶಃ ಮಾನ್ಯ ಸದಸ್ಯರ ಪತ್ರ ನನಗೆ ತಲುಪದೆ ಇರುವುದರಿಂದ ಅವರಿಗೆ ಉತ್ತರ ಹೋಗಿಲ್ಲವೆಂದು ಕಾಣುತ್ತದೆ.

ಶ್ರೀ ಜಿ. ಚಂದ್ರಕಾಂತ್.—ನಾನು ಒಂದು ಸಾರ್ವಜನಿಕ ಎರಡಾವರ್ತಿ ಪತ್ರ ಬರೆದಿದ್ದೇನೆ. ಆ ಪೈಕಿ ಒಂದೂ ಬರಲಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ನಾವು ಮೊದಲೇನು ಒಂದು ವಿಷಯವನ್ನು ನಮ್ಮ ಅಧಿಕಾರಿಗಳಿಗೆ ತಿಳಿಸಿದ್ದೆವೋ ಅದರ ಪ್ರಕಾರ ಅವರು ನೋಟೀಸನ್ನು ಕೊಟ್ಟರು. ಆದರೆ ಇತ್ತೀಚೆಗೆ ಅಲ್ಲಿ ಒಂದು ಎನ್‌ಕೌಂಟರ್ ನಡೆದ ನಂತರ ಆ ಬಗ್ಗೆ ನಾನು ಪ್ರತ್ಯೇಕ ಹೇಳಿಕೆ ಒಂದನ್ನು ಕೊಟ್ಟಿದ್ದೇನೆ. ಅದು ಎಲ್ಲ ಪತ್ರಿಕೆಗಳಲ್ಲೂ ಪ್ರಕಟವಾಗಿದೆ.

ಶ್ರೀ ಎಂ. ಜಿ. ಬಣಕಾರ್.—ಆ ಕೊಯ್ನಾ ಡ್ಯಾಮಿನ ವಿಚಾರಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳೇನಿವೆಯೋ ಅವು ಕೇಂದ್ರಕ್ಕೇ ಸಂಬಂಧಪಟ್ಟವರು ಅಥವಾ ರಾಜ್ಯಸರ್ಕಾರಕ್ಕೇ ಸಂಬಂಧ ಪಟ್ಟವರು ಅವುಗಳನ್ನು ಈ ಸಭೆಯ ಮುಂದೆ ಮಂಡಿಸಿದರೆ ಆಗತಕ್ಕ ಹಾನಿಯೇನು ?

ಶ್ರೀ ವೀರೇಂದ್ರ ಪಾಟೀಲ್.—ಆ ಒಂದು ಎಕ್ಸ್‌ಪರ್ಟ್ ಕಮಿಟಿಯ ವರದಿಯನ್ನು ಕೇಂದ್ರ ಸರ್ಕಾರದವರು ತರಿಸಿಕೊಂಡಿದ್ದಾರೆ. ಅದನ್ನು ನಾನು ಇಲ್ಲಿ ಸಭೆಯ ಮುಂದೆ ಇಡತಕ್ಕ ಹಕ್ಕು ನನಗಿಲ್ಲ ; ಆ ಅಧಿಕಾರವೂ ನನಗಿಲ್ಲ.

ಶ್ರೀ ಪಿ. ಎನ್. ಪಾಟೀಲ್.—ಆ ರಿಪೋರ್ಟಿನ ಪ್ರಕಾರ ಆ ಡ್ಯಾಮಿಗೆ ಮುಂದೆ ರಿಸ್ಕ್ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಹೇಳಲಿಕ್ಕೇನು ತೊಂದರೆ ?

ಶ್ರೀ ವೀರೇಂದ್ರ ಪಾಟೀಲ್.—ಅಲ್ಲಿಗೆ ಆ ಎಕ್ಸ್‌ಪರ್ಟ್ ಸಮಿತಿಯವರು ಹೋಗಿ ಎಲ್ಲವನ್ನೂ ಪರಿಶೀಲನೆ ಮಾಡಿ ಆ ಬಗ್ಗೆ ಒಂದು ಚೆಕ್ಕಿಕರ್ ಆಡ್ವೈಜನ್ನು ಕೊಟ್ಟಿದ್ದಾರೆ. ಅವರು ಅಲ್ಲಿ ಹಾಗೆ ಏನೇನು ಕಾರ್ಯಕ್ರಮಗಳನ್ನು ಕೈಗೆಳ್ಳಬೇಕೆಂದು ಸಲಹೆ ಮಾಡಿದ್ದಾರೋ ಅವುಗಳನ್ನೆಲ್ಲಾ ಮಹಾರಾಷ್ಟ್ರ ಸರ್ಕಾರದವರು ಈಗಾಗಲೇ ಕೈಗೊಂಡಿದ್ದಾರೆ. ಹಾಗೆ ಅವರು ಎಲ್ಲಾ ಪ್ರಿಕಾಷನ್‌ಗಳನ್ನೂ ತೆಗೆದುಕೊಂಡಿರುವುದರಿಂದ ಡ್ಯಾಮಿಗೇನೂ ತೊಂದರೆಯಿಲ್ಲ ಎಂದು ಗೊತ್ತಾಗಿದೆ.

ಶ್ರೀ ಎಸ್. ಎಸ್. ಅರಕೇರಿ.—ಹಿಂದೆ ಕೊಯ್ನಾ ಡ್ಯಾಂ ಒಡೆದುಹೋದಾಗ ವಿಜಾಪುರ ಜಿಲ್ಲೆಯಲ್ಲಿ ಎಷ್ಟು ಹಳ್ಳಿಗಳಿಗೆ ತೊಂದರೆಯಾಗಿತ್ತು ?

ಶ್ರೀ ವೀರೇಂದ್ರ ಪಾಟೀಲ್.—ಅಲ್ಲಿ ಡ್ಯಾಂ ಒಡೆದ ಸಂಗತಿ ನನಗೇನೋ ಇಲ್ಲಿಯವರೆಗೂ ಗೊತ್ತಿಲ್ಲ.

ಶ್ರೀ ಬಿ. ಪರಮೇಶ್ವರಪ್ಪ.—ಆ ಎಕ್ಸ್‌ಪರ್ಟ್ ಸಮಿತಿಯವರು ಮಾಡಿರತಕ್ಕ ವರದಿ ಈಗ ಸರ್ಕಾರದ ಮಂತ್ರಿಗಳ ವಶವಲ್ಲಿದ್ದಾಗ ಅದನ್ನು ಸದಸ್ಯರಿಗೆ ತೋರಿಸಿದರೇನು ಅಪಾಯ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಒಂದು ಮಾತನ್ನು ನೆನಪಿಟ್ಟುಕೊಡಬೇಕು. ಆ ರಿಪೋರ್ಟನ್ನು ತರಿಸಿರತಕ್ಕವರು ಕೇಂದ್ರ ಸರ್ಕಾರದವರು. ಅದು ನಮ್ಮ ಸರ್ಕಾರದವರ ರಿಪೋರ್ಟಲ್ಲ. ಆದ್ದರಿಂದ ನಾನು ಅದನ್ನು ಈ ಸಭೆಯ ಮುಂದೆ ಮಂಡಿಸಲು ಸಾಧ್ಯವಿಲ್ಲ.

2-00 P.M.

ಶ್ರೀ ಎಸ್. ಬಂಗಾರಪ್ಪ.—ಈಗತಾನೆ ಮುಖ್ಯಮಂತ್ರಿಗಳು ರಾಜ್ಯಸರ್ಕಾರದವರು ಈ ಕೊಯ್ನಾ ಅಣೆಕಟ್ಟು ಏನಾದರೂ ಒಡೆದು ಹೋಗತಕ್ಕ ಭೀತಿಗೆ ಒಳಪಟ್ಟಿದ್ದರೆ ಆ ಪ್ರದೇಶದ ಜನರಿಗೆ ಎಚ್ಚರಿಕೆ ನೋಟೀಸನ್ನು ಹಾರಿ ಮಾಡಿದ್ದೇವೆ ಎಂದು ಹೇಳಿದರು. ಆ ಎಚ್ಚರಿಕೆ ನೋಟೀಸು ಎಲ್ಲಿಯವರೆಗೆ ಜಾರಿಯಲ್ಲಿ ಇರತ್ತದೆ, ಎಷ್ಟರಿಕೆ ನೋಟೀಸ್ ಪ್ರಕಾರ ಎಲ್ಲಾ ವಾನ ವಾಗಿರುವ ಜನರಿಗೆ ಒಂದು ವೇಳೆ ಅಣೆಕಟ್ಟು ಒಡೆದರೆ, ದೋಣಿ, ಇತ್ಯಾದಿ ಸೌಕರ್ಯ ಮತ್ತು ಆಹಾರಪದಾರ್ಥಗಳನ್ನು ಒದಗಿಸುವುದಕ್ಕೆ ಸಿದ್ಧತೆ ಮಾಡಿದ್ದೀರಾ ?

L.A.

ಶ್ರೀ ವೀರೇಂದ್ರ ಪಾಟೀರ್.—ಅಜೆ ಉಪ್ಪೇಶವಿಂದ ಹೈ ರೆವರ್ ಕಮಿಟಿ ಮಾಡಿದ್ರೇಪೆ. ರೇತಿಮೋ ಮತ್ತು ಟ್ರಾನ್ಸಿಸ್ಟರ್ ಇಟ್ಟುಕೊಂಡು ಒಂದು ವೇಳೆ ಅವರನ್ನು ಎರಡನೇ ಕತೆಗೆ ಸಾಗಬೇಕಾಗಿದ್ದರೆ ಅದನ್ನೆಲ್ಲಾ ಆ ಹೈಲೆವರ್ ಕಮಿಟಿಯವರು ಮಾಡುತ್ತಾರೆ, ಅದಕ್ಕೆ ಅವರು ಕಾಯ-ಕ್ರಮ ತಗೆದುಕೊಳ್ಳುತ್ತಾ ಇದ್ದಾರೆ.

Mr. SPEAKER.—The Question Hour is over.

QUESTIONS FOR ANSWERS ON THE DAY

(but not taken up)

Collection of vaccine from He-Buffaloes

46. Sri B. B. SAYANAK (Belgaum).—

Will the Minister of State for Veterinary and Animal Husbandry be pleased to state :—

(*a*) whether it is a fact the vaccine is collected from the he-buffaloes and the authorities are calling for the tenders for this purpose ;

(*b*) whether the he-buffaloes are killed after the vaccine is collected ;

(*c*) if so, the reason thereof ?

A.—Sri G. B. SHANKAR RAO (Minister of State for Veterinary and Animal Husbandry).—

(*a*) No.

(*b*) No.

(*c*) Does not arise.

Intensive Cattle Development Centres

50. Sri S. S. SHETTAR (Hubli).—

Will the Minister of State for Veterinary and Animal Husbandry be pleased to state :—

(*a*) the number of Intensive Cattle Development Centres in Mysore at present ;

(*b*) whether there is any proposal before the Government for opening of such centre in the Bombay-Karnataka Area, particularly in Hubli-Dharwar Corporation Area ?